**<u>ಅಸಲು ದಾವಾ ಸಂಖ್ಯೆ:- 47/2022</u>**　　　　　　**<u>ಪಿ.ಡಬ್ಲ್ಯೂ:-</u> 2**

ದಿನಾಂಕಃ **12-08-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ನಿಪಿ-1 ಮುಖ್ತಾರನಾಮೆಯಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಕಾಮವ್ವರವರಿಗೆ 3 ಜನ ಮಕ್ಕಳು ಅಂದರೆ ಗೌರಮ್ಮ, ಶಾಂತಮ್ಮ ಮತ್ತು ಗಿರಿಜಮ್ಮ. ವಾದಿ ಗೌರಮ್ಮನ ಮಗಳು. ಗೌರಮ್ಮರವರಿಗೆ 4 ಜನ ಮಕ್ಕಳು ಅಂದರೆ ಕಾವೇರಮ್ಮ, ರೇಖಮ್ಮ, ಬೀರೇಶ ಮತ್ತು ವಾದಿ. ಶಾಂತಮ್ಮರವರಿಗೆ ಮಂಜುಳಾ ಎಂಬ ಒಬ್ಬ ಮಗಳು. ಗಿರಿಜಮ್ಮರವರಿಗೆ ಇಬ್ಬರು ಮಕ್ಕಳು ಅಂದರೆ ಚನ್ನೇಶ ಮತ್ತು ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ. ನಿಪಿ-3 ನೋಟೀಸನ್ನು ವಾದಿ ಮಾತ್ರ ಕೊಟ್ಟಿದ್ದಾರೆ ವಿನಃ ಕಾಮವ್ವನ ಇತರ ವಾರಸುದಾರರಿಗೆ ನೋಟೀಸನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಉಳಿದವರು ವಾದಿಗೆ ತಾವುಗಳು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಆದ ಕಾರಣ ವಾದಿ ಹೇಳಿದ ಮೇರೆಗೆ ವಾದಿ ಒಬ್ಬರೇ ನೋಟೀಸನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನೋಟೀಸಿನಲ್ಲಾಗಲೀ ಅಥವಾ ವಾದ ಪತ್ರದಲ್ಲಾಗಲೀ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-3 ನೋಟೀಸಿಗೆ ಮಾಹಿತಿಯನ್ನು ವಾದಿ ವಕೀಲರಿಗೆ ಕೊಟ್ಟಿರಬಹುದು. ಕಾಮವ್ವನ ವಾರಸುದಾರರು ವಿದ್ಯಾವಂತರು ಎಂದರೆ ಸರಿಯಲ್ಲ. ದಿಃ 25-01-1968 ರಲ್ಲಿ ರಾಮಪ್ಪರವರು ಕಾಮವ್ವರವರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ದಾವಾ ಆಸ್ತಿಯು ರಾಮಪ್ಪರವರಿಗೆ ಹೇಗೆ ಬಂತು ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. ಸರ್ವೇ ನಂ.55 ರಲ್ಲಿ ರಾಮಪ್ಪರವರಿಗೆ 19 ಗುಂಟೆ ಜಮೀನು ಸರ್ಕಾರದಿಂದ ಮಂಜೂರಾಗಿದ್ದು ಆದರೆ ಸದರಿ ಮಂಜೂರಾತಿ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಸರ್ಕಾರದವರು ಸದರಿ ಆಸ್ತಿಯನ್ನು ಮುಟ್ಟುಗೋಲು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-4 ಆರ್ ಟಿ ಸಿ ಯಲ್ಲಿ ಸರ್ವೇ ನಂ.55/1 ರಲ್ಲಿ 19 ಗುಂಟೆ ಸರ್ಕಾರದವರು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ನಮೂದಾಗಿದೆ ಎಂದರೆ ನನಗೆ

ಗೊತ್ತಿಲ್ಲ. ನಿಪಿ-2 ಕ್ರಯದ ಕರಾರು ಪತ್ರಕ್ಕೆ ರುದ್ರಪ್ಪಗೌಡ ಪಟೇಲ್, ಕೆ ಹನುಮಂತಪ್ಪ, ಹೊನ್ನಪ್ಪ ಮತ್ತು ಗದಿಗೆವ್ವ ರವರು ಸಾಕ್ಷಿದಾರರಾಗಿ ಸಹಿಯನ್ನು ಮಾಡಿದ್ದಾರೆ. ನಿಪಿ-2 ಕ್ರಯದ ಕರಾರು ಪತ್ರವನ್ನು ರೂ.1215/- ಕ್ಕೆ ಮಾಡಿಕೊಂಡಿದ್ದು ಅದರಲ್ಲಿ ಮುಂಗಡವಾಗಿ ರೂ.815/- ಅನ್ನು ಕೊಟ್ಟು ಉಳಿದ ಬಾಕಿ ರೂ.400/- ಅನ್ನು ಕ್ರಯ ಪತ್ರವನ್ನು ನೋಂದಣಿ ಸಮಯದಲ್ಲಿ ಕೊಡಬೇಕೆಂದು ಮಾತುಕತೆ ಆಗಿರುತ್ತದೆ. ನಿಪಿ-2 ರ ವ್ಯವಹಾರವು ಕಾಮವ್ವರವರು ಮನೆಯಲ್ಲಿ ನಡೆದಿರುತ್ತದೆ. ನಿಪಿ-2 ಕ್ರಯದ ಕರಾರು ಪತ್ರವನ್ನು ಕಾಮವ್ವನ ಮನೆಯಲ್ಲಿ ಬರೆದುಕೊಡುವ ಸಮಯದಲ್ಲಿ ರಾಮಪ್ಪ ಮತ್ತು ಸಾಕ್ಷಿದಾರರು ಇದ್ದರು. ಕ್ರಯದ ಹಣವನ್ನು ನನ್ನ ಸಮಕ್ಷಮ ಕೊಟ್ಟಿರುವುದಿಲ್ಲ ಆದರೆ ನಾನು ಸದರಿ ವಿಚಾರವನ್ನು ಕಾಮವ್ವರವರಿಂದ ತಿಳಿದುಕೊಂಡಿರುತ್ತೇನೆ. ನನಗೆ ನಿಪಿ-2 ರ ವಿಚಾರ ತಿಳಿದಾಗ ನಾನು ಅಪ್ರಾಪ್ತವಯಸ್ಕನಾಗಿದ್ದೆ. ಕಾಮವ್ವನ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕಾಮವ್ವರವರು ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಕಾಮವ್ವರವರು ರಾಮಪ್ಪರವರಿಗೆ 100 ರೂ ಮುಖ ಬೆಲೆಯ ಹಣವನ್ನು ಕೊಟ್ಟಿರುತ್ತಾರೆ. ಕಾಮವ್ವರವರು ನನ್ನ ಹೆಂಡತಿಯ ಕುಟುಂಬದವರು ಎಂದರೆ ಸರಿ. ನಿಪಿ-2 ಕ್ರಯದ ಕರಾರು ಪತ್ರವನ್ನು ನಿಖರವಾಗಿ ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಛಾಪಾಕಾಗದವನ್ನು ರಾಮಪ್ಪರವರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಆದರೆ ನಿರ್ದಿಷ್ಟವಾಗಿ ಯಾವ ದಿನಾಂಕದಂದು ಮತ್ತು ಯಾರು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಬಕಲಟ್ಟಿ ಹನುಮಂತಪ್ಪನ ಜಮೀನು, ಪಶ್ಚಿಮಕ್ಕೆ ಕರೆಉಡುಗಣ್ಣನ ಬಸಪ್ಪನ ಜಮೀನು, ಉತ್ತರಕ್ಕೆ ತಿಮ್ಮಾಲ್ಕರ ಹನುಮಂತಪ್ಪನ ಜಮೀನು, ದಕ್ಷಿಣಕ್ಕೆ ಓಣಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.